
## ಯುವಚೇತನ



# ಸ್ವಾಮೀಜಿ-ಶಿಷ್ಯ ಸಂವಾದ

**ಶಿಷ್ಯ:** ಪ್ರರಬ್ರಹ್ಮನ ಅಂಶವೇ ನಮ್ಮಲ್ಲೂ ಇದ್ದ ಪಕ್ಷಕ್ಕೆ ನಾವೇಕೆ ಆ ಆನಂದವನ್ನು ಪಡೆಯಲು ಹೋರಾಡುವುದಿಲ್ಲ? ನಾವೇಕೆ ಈ ಕ್ಷುದ್ರ ಕಾಮಿನಿ ಕಾಂಚನದ ಬಲೆಗೆ ಮೋಹಗೊಂಡು ಮೃತ್ಯುವಿನ ದವಡೆಗೆ ಪುನಃ ಪುನಃ ಓಡಿಹೋಗಿ ಬೀಳುತ್ತೇವೆ?

**ಸ್ವಾಮೀಜಿ:** ನೀನೀಗ ಹೇಳುತ್ತಿರುವುದು ಮನುಷ್ಯನು ಆ ಸಚ್ಚಿದಾನಂದದ ಸವಿಗೆ ಆಸೆ ಪಡುತ್ತಿಲ್ಲ ಎಂದು! ಗಾಢವಾಗಿ ಯೋಚಿಸು. ಯಾರಾದರಾಗಲಿ, ಅವನೇನನ್ನು ಮಾಡು ತ್ತಿದ್ದಾನೆಯೋ ಅದನ್ನು ಸಚ್ಚಿದಾನಂದವನ್ನು ಪಡೆಯುವ ಆಸೆಯಿಂದಲೇ ಮಾಡುತ್ತಿದ್ದಾ ನೆಂದು ನಿನಗೆ ತಿಳಿಯುವುದು. ಆದರೆ ಎಲ್ಲರೂ ಅದನ್ನು ಅರಿತು ಮಾಡುತ್ತಿಲ್ಲ. ಅದಕ್ಕೇ ಅದನ್ನು ಅರ್ಥಮಾಡಿಕೊಳ್ಳಲಾರರು. ಬ್ರಹ್ಮನಿಂದ ಹಿಡಿದು ಹುಲ್ಲುಕಡ್ಡಿಯವರೆಗೆ ಎಲ್ಲದ ರಲ್ಲೂ ಸಚ್ಚಿದಾನಂದವು ಪೂರ್ಣವಾಗಿ ಇದ್ದೇ ಇದೆ. ನೀನೂ ಕೂಡ ಆ ಅಖಂಡ ಬ್ರಹ್ಮ. ನೀನು ನಿಜವಾಗಿಯೂ ಪ್ರಮಾಣವಾಗಿ ಹೀಗೆಂದು ತಿಳಿದುಕೊಂಡಲ್ಲಿ, **ಈ ಕ್ಷಣದಲ್ಲೆಯೇ ಅದನ್ನು ಸಾಕ್ಷಾತ್ಕರಿಸಿಕೊಳ್ಳಬಹುದು.** ಕೇವಲ ಸ್ಪಷ್ಟವಾದ ಅನುಭವ ಬೇಕಾ ಗಿದೆ. ನಿನ್ನ ಸತಿಸುತರಿಗಾಗಿ ಇಷ್ಟೊಂದು ಕಷ್ಟಪಟ್ಟು ಕೆಲಸ ಮಾಡುತ್ತಿರುವುದು ಕೂಡ ಅಂತ್ಯದಲ್ಲಿ ಆ ಸಚ್ಚಿದಾನಂದ ಬ್ರಹ್ಮನನ್ನು ಪಡೆಯುವುದಕ್ಕಾಗಿಯೆ. ಬಾರಿಬಾರಿಗೂ ಮಾಯೆಯ ಜಟಿಲ ತೊಡಕಿನಲ್ಲಿ ಸಿಕ್ಕಿ ದುಃಖ ಕೋಟಲೆಗಳ ಪೆಟ್ಟನ್ನು ತಿಂದಾಗ ತನ್ನಷ್ಟಕ್ಕೆ ತಾನೇ ಮನಸ್ಸು ತನ್ನ ನಿಜಸ್ವರೂಪವಾದ ಆತ್ಮನ ಕಡೆ ತಿರುಗುತ್ತದೆ. ನಮ್ಮ ಹೃದಯದಲ್ಲಿರುವ ಈ ಸಚ್ಚಿದಾನಂದವನ್ನು ಪಡೆಯುವ ಆಸೆ ಇರುವುದರಿಂದಲೇ ಮಾನವನು ಒಂದಾದ ಮೇಲೊಂದು ಪೆಟ್ಟನ್ನು ತಿಂದು ತನ್ನ ಕಣ್ಣನ್ನು ಅಂತರಂಗದ ಕಡೆ ತಿರುಗಿಸುವನು. ಪ್ರತಿಯೊಬ್ಬರಿಗೂ ತಪ್ಪದೆ ಒಂದಲ್ಲ ಒಂದು ಸಾರಿ ಈ ಸ್ಥಿತಿ ಬಂದೇ ಬರುವುದು. ಆಗ ಅವನು ಇದನ್ನು ಮಾಡುವನು. ಒಬ್ಬನಿಗೆ ಈ ಜನ್ಮದಲ್ಲೇ ಬರಬಹುದು. ಇನ್ನೊಬ್ಬನಿಗೆ ಸಾವಿರಾರು ಜನ್ಮಗಳಾದ ನಂತರ ಬರಬಹುದು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೮, ಪು.೧೫೯)*



## ಶ್ರೀಮಾತೆಯವರ ಉಪದೇಶಗಳು

**ಶಿಷ್ಯ:** ಎಲ್ಲವೂ ಕರ್ಮಕ್ಕೆ ಅನುಸಾರವಾಗಿ ಆಗುವುದೆ ?

**ಶ್ರೀಮಾತೆ:** ಕರ್ಮವಲ್ಲದಿದ್ದರೆ ಇನ್ನೇನು? ನೋಡು, ಆ ತೋಟಿಯವನು ಮಲದ ತೊಟ್ಟಿಯನ್ನು ಹೊತ್ತುಕೊಂಡು ಹೋಗುತ್ತಿದ್ದಾನೆ.

**ಶಿಷ್ಯ:** ಮನುಷ್ಯನಿಗೆ ಒಳ್ಳೆಯ, ಕೆಟ್ಟ ಪ್ರವೃತ್ತಿಗಳು ಆರಂಭವಾದುದು ಎಲ್ಲಿಂದ? ಈ ಜನ್ಮಕ್ಕೆ ಅದಕ್ಕೂ ಹಿಂದಿನ ಜನ್ಮದ ಕರ್ಮ ಕಾರಣ ಅಂತ ನೀವು ಹೇಳಬಹುದು. ಆದರೆ ಎಲ್ಲಕ್ಕೂ ಆದಿ ಯಾವುದು ?

**ಶ್ರೀಮಾತೆ:** ಭಗವಂತನ ಇಚ್ಛೆಯಿಲ್ಲದೆ ಯಾವುದೂ ಸಾಧ್ಯವಾಗದು; ಒಂದು ಹುಲ್ಲು ಕಡ್ಡಿಯೂ ಅಲುಗಾಡದು. ಜೀವಕ್ಕೆ ಸುಸಂದರ್ಭ ಬಂದಾಗ ಧ್ಯಾನ ಮಾಡುವ ಅವಕಾಶ ಒದಗುವುದು. ಭಗವಂತನ ಇಚ್ಛೆ ಯಾವುದೋ ಅದನ್ನು ತಕ್ಕ ಸಮಯದಲ್ಲಿ ಅವನು ಮನು ಷ್ಯನ ಕರ್ಮದ ಮೂಲಕ ಪ್ರಕಟಗೊಳಿಸುತ್ತಾನೆ. ನರೇನ್‌ಗೆ ಏನು ಸಾಧ್ಯವಿತ್ತು? ಭಗವಂತ ಅವನ ಮೂಲಕ ಕೆಲಸ ಮಾಡಿದ್ದರಿಂದಲೇ ಅವನು ಇವೆಲ್ಲವನ್ನೂ ಮಾಡಲು ಸಾಧ್ಯವಾಯಿತು. ಶ್ರೀರಾಮಕೃಷ್ಣರು ಏನನ್ನು ಮಾಡುವರೋ ಅದೆಲ್ಲವನ್ನೂ ಆಗಲೇ ನಿರ್ಧರಿಸಿಬಿಟ್ಟಿದ್ದಾರೆ. ಯಾರು ಅವರ ಮೇಲೆ ತಮ್ಮೆಲ್ಲ ಭಾರವನ್ನೂ ಒಪ್ಪಿಸಿಬಿಡುವರೋ, ಅವರ ಎಲ್ಲವನ್ನೂ ಅವರೇ ನೋಡಿಕೊಳ್ಳುವರು. ಎಲ್ಲವನ್ನೂ ಸಹಿಸಿಕೊಳ್ಳಬೇಕು. ಏಕೆಂದರೆ, ಕರ್ಮಕ್ಕೆ ತಕ್ಕಂತೆ ಎಲ್ಲವೂ ನಿರ್ಧರಿಸಲ್ಪಡುವುದು. ಅಂತೆಯೇ ಕರ್ಮದ ಮೂಲಕವೇ ಕರ್ಮ ಕತ್ತರಿಸಲ್ಪಡುವುದು.

**ಶಿಷ್ಯ:** ಕರ್ಮದ ಮೂಲಕ ಕರ್ಮ ಕತ್ತರಿಸಲ್ಪಡುವುದೆ ?

**ಶ್ರೀಮಾತೆ:** ಅಲ್ಲವೇ ಮತ್ತೆ ? ನೀನು ಒಂದು ಸತ್ಕಾರ್ಯವನ್ನು ಮಾಡಿದರೆ ಅದರಿಂದ ಪಾಪವೆಲ್ಲ ನಾಶವಾಗುವುದು. ಧ್ಯಾನ, ಜಪ, ಈಶ್ವರಚಿಂತನೆಗಳಿಂದ ಪಾಪ ಕತ್ತರಿಸಲ್ಪಡುವುದು.

**ಶ್ರೀಶಾರದಾದೇವಿ ವಚನವೇದದಿಂದ** *(ಪು.೧೫೫)*